ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/17/ಸಿಎಂಆರ್‌ವಿಎನ್/2021-22

ಕಾಲೇಜು ಶಿಕ್ಷಣ ಆಯುಕ್ತರಕಛೇರಿ,
ಬೆಂಗಳೂರು, ದಿನಾಂಕ:08.11.2021

## ಸುತ್ತೋಲೆ

ವಿಷಯ : ರೈತರ ಮಕ್ಕಳನ್ನು ಉನ್ನತ ಶಿಕ್ಷಣ ಪಡೆಯಲು ಪ್ರೋತ್ಸಾಹಿಸುವ ಸಲುವಾಗಿ ಮುಖ್ಯಮಂತ್ರಿ ರೈತ ವಿದ್ಯಾನಿಧಿ ಹೆಸರಿನ ವಿದ್ಯಾರ್ಥಿ ವೇತನ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:
1. ದಿನಾಂಕ: 28.07.2021ರಂದು ನಡೆದ ಸಚಿವ ಸಂಪುಟದ ನಿರ್ಣಯ (ಪ್ರಕರಣ ಸಂಖ್ಯೆ:ಸಿ:318/2021).
2. ಸರ್ಕಾರದ ಆದೇಶ ಸಂಖ್ಯೆ: AGRI-AML/141/2021, ಬೆಂಗಳೂರು ದಿನಾಂಕ:07.08.2021.
3. ಕೃಷಿ ಇಲಾಖೆಯ ಪತ್ರ ಸಂಖ್ಯೆ: COA/CMRVN/Pub 01/2021-22 Dt:28.10.2021.
4. ಕೃಷಿ ಇಲಾಖೆಯ ಪತ್ರ ಸಂಖ್ಯೆ : ಉಕೃನಿ/ತಾಂ-2/ಹೊಸ ಶಿಷ್ಯ ವೇತನ/3/2021 ದಿನಾಂಕ:06.11.2021.

********

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ 2021-22ನೇ ಸಾಲಿನಿಂದ ರಾಜ್ಯದ ಎಲ್ಲಾ ರೈತರ ಮಕ್ಕಳನ್ನು ಉನ್ನತ ಶಿಕ್ಷಣ ಪಡೆಯಲು ಪ್ರೋತ್ಸಾಹಿಸುವ ಸಲುವಾಗಿ ರಾಜ್ಯ ಸರ್ಕಾರವು ಮುಖ್ಯಮಂತ್ರಿ ರೈತ ವಿದ್ಯಾನಿಧಿ. (CM-RVN) ಹೆಸರಿನ ವಿದ್ಯಾರ್ಥಿ ವೇತನ ನೀಡಲು ಉಲ್ಲೇಖ(1)ರ ದಿನಾಂಕದಂದು ನಡೆದ ಸಚಿವ ಸಂಪುಟದಲ್ಲಿ ನಿರ್ಣಯ ಕೈಗೊಂಡಿರುತ್ತದೆ.

ಅದರಂತೆ ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಸೂಚಿಸಿರುವಂತೆ ರಾಜ್ಯದ ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಅನುದಾನಿತ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ 2021-22ನೇ ಸಾಲಿಗೆ ಪ್ರವೇಶ ಪಡೆದು ವಿದ್ಯಾಭ್ಯಾಸ ಮಾಡುತ್ತಿರುವಂತಹ ರೈತರ ಮಕ್ಕಳು ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.

ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಈ ಕೆಳಕಂಡ ಷರತ್ತುಗಳು ಅನ್ವಯಿಸುತ್ತದೆ.

1) CM-RVN ಶಿಷ್ಯವೇತನ ಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ಪೋಷಕರು (ತಂದೆ/ತಾಯಿ) ರಾಜ್ಯದ ಯಾವುದೇ ಭಾಗದಲ್ಲಾದರೂ ಉಳುಮೆ ಮಾಡುವಂತಹ ಕೃಷಿ ಭೂಮಿಯನ್ನು ಹೊಂದಿರುವ ರೈತರಾಗಿರಬೇಕು.
2) ರೈತ ಮಕ್ಕಳ ತಂದೆ/ತಾಯಿ ಇಬ್ಬರೂ ಕೃಷಿ ಭೂಮಿ ಹೊಂದಿದ್ದಲ್ಲಿ ಮಕ್ಕಳು 01 ಶಿಷ್ಯವೇತನ ಪಡೆಯಲು ಅರ್ಹರಿರುತ್ತಾರೆ.
3) ಕಾನೂನಿನ ಪ್ರಕಾರ ದತ್ತು ಪಡೆದ ಮಕ್ಕಳು ಹಾಗೂ ಒಂದು ಪಕ್ಷ ಯಾವುದೇ ಮಕ್ಕಳಿಗೆ ಪೋಷಕರು ಇಲ್ಲದೆ ಇದ್ದ ಸಂದರ್ಭದಲ್ಲಿ ಮಕ್ಕಳು ಉಳುಮೆ ಮಾಡುವಂತಹ ಕೃಷಿ ಭೂಮಿಯನ್ನು ಅವರ ಹೆಸರಲ್ಲಿ ಹೊಂದಿದಲ್ಲಿ ಈ ಯೋಜನೆಯ ಲಾಭ ಪಡೆಯಬಹುದು.
4) ಈ ಶಿಷ್ಯ ವೇತನವು ಯಾವುದೇ ಕೋರ್ಸಿನ ಸೆಮಿಸ್ಟರ್/ ಶೈಕ್ಷಣಿಕ ವರ್ಷಗಳಿಗೆ ಸೀಮಿತವಾಗಿದ್ದು ಸದರಿ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣ ಹೊಂದಿ ಪುನರಾವರ್ತನೆಯಾದರೆ ವಿದ್ಯಾರ್ಥಿಗಳು ಶಿಷ್ಯವೇತನ ಪಡೆಯಲು ಅರ್ಹರಿರುವುದಿಲ್ಲ.

. . . 2

5) CM-RVN ಶಿಷ್ಯವೇತನವನ್ನು ಯಾವುದಾದರೂ ಒಂದು ವಿಧದ ಕೋರ್ಸ್‌ಗೆ ನೀಡಲಾಗುವುದು. ಉದಾಹರಣೆಗೆ ವಿದ್ಯಾರ್ಥಿ X ಎಂಬ ಸ್ನಾತಕೋತ್ತರ ಪದವಿಯನ್ನು ಪೂರೈಸಿದ ನಂತರ Y ಎಂಬ ಸ್ನಾತಕೋತ್ತರ ಕೋರ್ಸ್‌ಗೆ ಪ್ರವೇಶ ಪಡೆದಲ್ಲಿ ಈ ಕೋರ್ಸ್‌ಗೆ ಶಿಷ್ಯವೇತನ ಪಡೆಯಲು ಅರ್ಹರಿರುವುದಿಲ್ಲ.

6) ರೈತರ ಮಕ್ಕಳು ಕರ್ನಾಟಕ ರಾಜ್ಯದ ಅನುದಾನದಿಂದ ಪಾವತಿಸುವಂತಹ 01 ಶಿಷ್ಯವೇತನಕ್ಕೆ ಅರ್ಹರಿರುತ್ತಾರೆ. ಆದರೆ ಮೆರಿಟ್, ರ್‍ಯಾಂಕ್ ಆಧಾರಿತವಾಗಿ ಪಡೆಯುವ ಶಿಷ್ಯವೇತನ ಪಡೆದಿದ್ದಲ್ಲಿ ಈ ಶಿಷ್ಯ ವೇತನ ಪಡೆಯಲು ಸಹ ಅರ್ಹರಿರುತ್ತಾರೆ.

7) ರೈತರ ಮಕ್ಕಳು ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಈ ವಿದ್ಯಾರ್ಥಿ ವೇತನ ಪಡೆಯಲು ಅರ್ಹರಿರುವುದಿಲ್ಲ.

8) ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ಮೊತ್ತವನ್ನು ಡಿಬಿಟಿ ಮುಖಾಂತರ ಪಾವತಿ ಮಾಡಲಾಗುತ್ತಿದ್ದು, ವಿದ್ಯಾರ್ಥಿಗಳು ತಾವು ಹೊಂದಿರುವ ಬ್ಯಾಂಕ್ ನ ಉಳಿತಾಯ ಖಾತೆಗೆ ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಜೋಡಣೆ ಮಾಡಿ /NPCI Mapping ಖಾತ್ರಿ ಮಾಡಿಕೊಳ್ಳಬೇಕು.

9) ಅರ್ಹ ವಿದ್ಯಾರ್ಥಿಗಳು ದಿ:11.11.2021ರೊಳಗಾಗಿ ssp.postmatric.karnataka.gov.in ಈ ಪೋರ್ಟಲ್ ಮೂಲಕ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಬೇಕು.

10) ವಿದ್ಯಾರ್ಥಿಗಳ ತಂದೆ/ತಾಯಿಯವರ FRUITS ನೊಂದಾಣಿಯಾಗದಿದ್ದಲ್ಲಿ ಕೂಡಲೇ FID ಸೃಜನೆ ಮಾಡುವುದು.

ಈ ಮೇಲ್ಕಂಡ ವಿವರಣೆಗಳ ಅನುಸಾರವಾಗಿ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ಪ್ರಾಂಶುಪಾಲರುಗಳ ಮೂಲಕ ವಿದ್ಯಾರ್ಥಿಗಳು ಮುಖ್ಯಮಂತ್ರಿ ರೈತ ವಿದ್ಯಾನಿಧಿ, (CM-RVN) ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಸೂಕ್ತ ಮಾರ್ಗದರ್ಶನ ನೀಡುವಂತೆ ಈ ಮೂಲಕ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಲಗತ್ತುಗಳು:

1. ಸರ್ಕಾರದ ನಡಾವಳಿ
2. ಕೃಷಿ ಇಲಾಖೆಯ ಪತ್ರ ಹಾಗೂ ಸುತ್ತೋಲೆ

ಇವರಿಗೆ:

1. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು – 01.
2. ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಬೆಂಗಳೂರು ಮೈಸೂರು ಮಂಗಳೂರು ಶಿವಮೊಗ್ಗ, ಧಾರವಾಡ ಹಾಗೂ ಕಲ್ಬುರ್ಗಿ.
3. ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಸೂಕ್ತ ಕ್ರಮಕ್ಕಾಗಿ.
4. ಕಛೇರಿ ಪ್ರತಿ.